ಶ್ರೀ ಎಚ್. ಬಿ. ಕೃಷ್ಣಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಸಾಲಗಳ ಬಗ್ಗೆ ಹೇಳುವುದಾದರೆ, ಅಭಿವೃದ್ಧಿ ಸಾಲಗಳು ಸಿಕ್ಕುತ್ತಾ ಇವೆ. ಆದರೆ ಆವಶ್ಯಕತೆಯನ್ನು ಪೂರೈಸುವುದಕ್ಕೆ ಸ್ವಲ್ಪ ತೊಂದರೆಗಳು ಬರುತ್ತಾ ಇವೆ. ಉದಾಹರಣೆಗೆ ಹೇಳುವುದಾದರೆ, ಕನ್ ಸಂಪ್ಷನ್ ಲೋನ್ ಎಂದು ಕೊಡುತ್ತಾರೆ. ಮುಂಡ್ಯಾಕ್ಕೆ 10 ಲಕ್ಷ ರೂಪಾಯಿಗಳನ್ನು ಒಂದು ವರ್ಷಕ್ಕೆ ಕೊಡಬೇಕು ಎಂದು ತೀರ್ಮಾನ ಮಾಡಿಕೊಂಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಒಂದು ತಾಲ್ಲೂಕಿಗೆ 10 ಲಕ್ಷ ರೂಪಾಯಿಗಳು ಸಾಲುವುದಿಲ್ಲ. ಆದುದರಿಂದ ಈ ಮೊಬಲಗನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

SRI D DEVARJ URS.—Of-course our desire is to get more and more loans through the Reserve Bank. The whole matter is ultimately governed by the Reserve Bank Policy which is in turn guided by the Central Government. Therefore, let us see that we get more and more funds. Now our friends are there and they may help us.

1-30 P. M.

Irrigation Facilities to Tumkur District.

44. SRI B. BHYRAPPAJI (Turuvekere).—Will the Chief Minister be pleased to state :—

(*a*) the villages for which the estimate for irrigation scheme has been prepared for in Tumkur District by extending the Hemavati Left Bank-channel ;

(*b*) if so, the expenditure likely to be incurred for the above channel ;

(*c*) the extent of land that comes under cultivation by extending of the said channel ;

(*d*) whether the Government would arrange to start the channel work this year itself as the famine conditions prevail due to failure of rains?

SRI D. DEVARAJ URS (Chief Minister).—

(*a*) It is proposed to provide irrigation facilities from the second stage of Hemavathi Left Bank channel to Tiptur, Turuvekere, Gubbi, Tumkur and Kunigal taluks of Tumkur district The other details are being worked out.

(*b*) The estimated amounts of Tumkur division left bank channel is Rs. 4,882 lakhs and that in respect of Nagamangala division is Rs. 2418 lakhs.

(*c*) It is estimated that a total of 5,12,000 acres of land would come under irrigation with the extension of Tumkur and Nagamangala divisions.

(*d*) The mater is under consideration.

ಶ್ರೀ ಬಿ. ಬೈರಪ್ಪಾಜಿ —ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಹೇಮಾವತಿ ಎಡದಂಡೆ ನಾಲೆಯ ಎರಡನೆಯ ಹಂತದಿಂದ ತುಮಕೂರು ಜಿಲ್ಲೆಯ 5 ತಾಲ್ಲೂಕುಗಳಿಗೆ ನೀರಾವರಿ ವ್ಯವಸಾಯ ಒದಗಿಸಲು ಉದ್ದೇಶಿಸಲಾಗಿದೆಯೆಂದು ಹೇಳಿದೆ. ಅಂದಮೇಲೆ ಮೊದಲನೆ ಹಂತ ಯಾವಾಗ ಮುಗಿಯುತ್ತದೆ? ಅದು ಮುಗಿದ ನಂತರ ಎರಡನೆಯ ಹಂತ ಯಾವಾಗ ಪ್ರಾರಂಭವಾಗುತ್ತದೆ ?

† ಶ್ರೀ ಡಿ. ದೇವರಾಜ ಅರಸ್.—ಯೋಜನೆ ಮುಗಿಯುವುದು ಪ್ರಾರಂಭವಾಗುವುದು ಡೇಟ್ ಮೇಲೆ ಹೋಗುವುದಿಲ್ಲ, ಹಣದ ಮೇಲೆ ಹೋಗುತ್ತದೆ. ಹಣ ಹೆಚ್ಚಿಗೆ ಸಿಕ್ಕಿದಂತೆ ಆ ಯೋಜನೆ ಮುಗಿಯುತ್ತದೆ. ಈ ಸಾರಿ ಆ ಯೋಜನೆಗೆ ಹೆಚ್ಚಿಗೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಐದನೆಯ ಯೋಜನೆಯಲ್ಲಿ ಎಷ್ಟರ ಮಟ್ಟಿಗೆ ಈ ಯೋಜನೆಗೆ ಹಣವನ್ನು ಒದಗಿಸಲಾಗಿದೆಯೆಂಬುದು ತಮಗೆ ಗೊತ್ತಿದೆ. ಈ ಯೋಜನೆಗೆ ಒಟ್ಟು ಖರ್ಚು 160 ಕೋಟಿ ರೂಪಾಯಿಗಳಾಗುತ್ತದೆ. ಈ ಯೋಜನೆಯ ಒಂದನೇ ಮತ್ತು ಎರಡನೇ ಹಂತಗಳಲ್ಲಿ ಒಟ್ಟು ಖರ್ಚು 160 ಕೋಟಿ ರೂಪಾಯಿಗಳಾಗುತ್ತದೆಂದು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ ಅಲ್ಲಿ ಅವರು ಇನ್ನೂ ಅದನ್ನು ಪೂರ್ತಿಯಾಗಿ ಒಪ್ಪಿಗೆಮಾಡಿ ನಮಗೆ ಕಳುಹಿಸಿಲ್ಲ. ನಮ್ಮ ಪಾಡಿಗೆ ನಾವು ಆ ಯೋಜನೆಯ ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಈಗಾಗಲೇ ಇದರ ಬಗ್ಗೆ ಇನ್ನೊಂದು ವಿಷಯವನ್ನು ಈ ಸಭೆಯ ಗಮನಕ್ಕೆ ತಂದಿದ್ದೇನೆ. ಕಾವೇರಿ ವ್ಯಾಲಿ ಸ್ಕೀಮ್‌ನಲ್ಲಿ ಹೇಮಾವತಿ, ಹಾರಂಗಿ ಮತ್ತು ಕಪಿನಿಗಳ ಬಗ್ಗೆ ಇನ್ನೂ ಟೆಕ್ನಿಕಲ್ ಕ್ಲಿಯರೆನ್ಸ್ ಹಾಗೂ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ನಮಗೆ ಅಲ್ಲಿಂದ ಸಿಗಲಿಲ್ಲ. ಇನ್ನೂ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಹೀಗೆ ನಾನಾ ಕಾರಣಗಳಿಂದ ಅವರು ಅಲ್ಲಿಂದ ನಮಗೆ ಇದರ ಬಗ್ಗೆ ಇನ್ನೂ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡದೇ ಹೋದರೂ ಅದಕ್ಕೆ ಬೇಕಾದ ಹಣವನ್ನು ನಮ್ಮ ಬಜೆಟಿನಲ್ಲಿ ಒದಗಿಸಿಕೊಂಡು ಆ ಯೋಜನಾ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದೇವೆ. ಇದುವರೆಗೂ ಪ್ಲಾನಿನಲ್ಲಿ ಇದಕ್ಕೆಂದಾ ಅವರು ಹಣವನ್ನು ಡೈರೆಕ್ಟಾಗಿ ಕೊಟ್ಟಿಲ್ಲ. ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ನಾವು ಹಣವನ್ನು ಹೆಚ್ಚಿಗೆ ಒದಗಿಸಿಕೊಂಡು ಕೆಲಸಮಾಡುತ್ತಿದ್ದೇವೆ. ಯಾವುದೇ ಸ್ಕೀಮ್ ತೆಗೆದುಕೊಳ್ಳಬೇಕಾದರೆ ಕಾವೇರಿ ವ್ಯಾಲಿಗೆ ಸಂಬಂಧಪಟ್ಟ ಯೋಜನೆಯ ಕೆಲಸಗಳನ್ನು ಹಿಂದಿನ ಕರಾರಿನ ಪ್ರಕಾರವೇ ಒಪ್ಪಿಕೊಂಡಂತೆ ತೆಗೆದುಕೊಳ್ಳುತ್ತಿದ್ದೇವೆ. ಅದರ ಬಗ್ಗೆ ಅವರು ತಕರಾರು ಹಾಕುವುದು ಬರಲಿಲ್ಲ, ಅವರು ಒಪ್ಪಿಗೆ ಕೊಡಲಿಲ್ಲ ನಮಗೆ ಅವರು ಟೆಕ್ನಿಕಲ್ ಕ್ಲಿಯರೆನ್ಸ್ ಮತ್ತು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕಳುಹಿಸುವುದು ನಿಧಾನವಾಗಿದ್ದರೂ ನಾವು ಆ ಯೋಜನೆಯ ಕೆಲಸಕಾರ್ಯಗಳನ್ನು ನಿಲ್ಲಿಸಲಿಲ್ಲ. ನಮ್ಮ ಕೆಲಸಗಳು ನಡೆಯುತ್ತಲೇ ಇವೆ. ಹೆಚ್ಚಿಗೆ ಸಿಕ್ಕದಂತೆ ಆ ಯೋಜನೆಯ ಕೆಲಸಗಳನ್ನು ಜಾಗ್ರತೆಯಾಗಿ ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. 1977-78ನೇ ವರ್ಷದ ಪ್ಲಾನ್ ಬಜೆಟ್ಟಿನಲ್ಲಿ ಕಪಿನಿ, ಹೇಮಾವತಿ ಮತ್ತು ಹಾರಂಗಿ-ಈ ಮೂರು ಪ್ರಾಜೆಕ್ಟ್‌ಗಳಿಗೂ ಸುಮಾರು 19 ಕೋಟಿ ರೂಪಾಯಿಗಳವರೆಗೆ ಒದಗಿಸಿದ್ದೇವೆ. ಅದೇ ರೀತಿಯಲ್ಲಿ ಅಕಾವತಿ ವ್ಯಾಲಿಯಲ್ಲಿ ಮೂರು ಸ್ಕೀಮುಗಳಿವೆ. ಅವಕ್ಕೆ 80 ಲಕ್ಷ ರೂಪಾಯಿಗಳು ಆಗುತ್ತದೆ ಇವೆಲ್ಲ ಸೇರಿದರೆ ಒಟ್ಟು 19 ಕೋಟಿ ರೂಪಾಯಿಗಳ ಮೇಲಿಯೇ ಆಗುತ್ತದೆ, ಹತ್ತಿರ ಹತ್ತಿರ ಆ ಯೋಜನೆಗಳ ಒಟ್ಟು ಖರ್ಚು 20 ಕೋಟಿ ರೂಪಾಯಿಗಳವರೆಗೆ ಬರುತ್ತದೆ. ಅಂದಮೇಲೆ ಈ ಯೋಜನೆ ಯಾವಾಗ, ಏನು ಎಂದು ಹೇಳಿದರೆ ಹೇಗೆ ? 160 ಕೋಟಿ ರೂಪಾಯಿಗಳನ್ನು ಎಷ್ಟು ಬೇಗ ಒದಗಿಸುತ್ತೇವೋ ಅಷ್ಟು ಬೇಗ ಈ ಯೋಜನೆಗಳು ಆಗುತ್ತವೆ.

ಶ್ರೀ ಬಿ. ಬೈರಪ್ಪಾಜಿ.—ತಾವು ಈಗಾಗಲೇ ಹೆಚ್ಚು ರಿಸ್ಕ್ ತೆಗೆದುಕೊಂಡು ಇದನ್ನು ಮಾಡುತ್ತಿದ್ದೀರಿ, ತುಮಕೂರು ಜಿಲ್ಲೆ ಬಹಳ ಕಷ್ಟ ಪರಿಸ್ಥಿತಿಯಲ್ಲಿದೆ. ಅಲ್ಲಿ ಕ್ಷಾಮ ಬೇಕರವಾಗಿದೆ. ಅಲ್ಲಿ ಕೇವಲ ರಸ್ತೆ ಮತ್ತು ಸಣ್ಣಪುಟ್ಟ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಬದಲು, ಅಲ್ಲಿ ನಾಲೆ ಅಗೆಯುವುದಕ್ಕೆ ಸುಮಾರು 10 ಕೋಟಿ ರೂಪಾಯಿಗಳನ್ನು ಒದಗಿಸಿ ಅಲ್ಲಿ ಚಾನಲ್ ಪ್ರಾರಂಭ ಮಾಡುವ ಕಾರ್ಯ ಈಗಾಗಲೇ ಪರಿಶೀಲನೆಯಲ್ಲಿರುವುದರಿಂದ, ಅದನ್ನಾದರು ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿರಾ ?

ಶ್ರೀ ಡಿ. ದೇವರಾಜ ಅರಸ್.—ಆ ರೀತಿ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಟೈಂ ಇದೆ ಆ ಟೈಂನಲ್ಲಿ ತೆಗೆದುಕೊಳ್ಳಬೇಕು. ಮಾನ್ಯ ಸದಸ್ಯರು ಹೇಳಿದಂತೆ 10 ಕೋಟಿ ರೂಪಾಯಿಗಳನ್ನು ಒದಗಿಸಿ ಉದ್ದಕ್ಕೂ ಬರೀ ಅಗೆದ ಪುದಕ್ಕಾಗುತ್ತದೆಯೇ ? ಅದನ್ನು ಇಂಜಿನಿಯರುಗಳಿಗೆ ಬಿಡೋಣ. ಸಾಮಾನ್ಯವಾಗಿ ಮಗು ಆಗಬೇಕಾದರೆ ಯಾರೇ ಆಗಲಿ 9 ತಿಂಗಳುಗಳು ಕಾಯಬೇಕು ಬೇಕು. ಆದಕ್ಕಿಂತ ಜಾಗ್ರತೆ ಬೇಕೆಂದರೆ, ಮಗು ಸಿಗುವುದಿಲ್ಲ. ಅಂದ ಮೇಲೆ ಆ ಟೈಂ ವರೆಗೆ ಕಾಯಬೇಕು. ಹೆಚ್ಚಿಗೆ ದುಡ್ಡನ್ನು ಒದಗಿಸಬೇಕು. 150 ಕೋಟಿ ರೂಪಾಯಿಗಳನ್ನು ಇವತ್ತೇ ಒದಗಿಸಿದರೂ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಅದಕ್ಕೂ ಒಂದು ಕಾಲ ಬೇಕು. ಹೇಮಾವತಿಗೆ ಈ ಸಾರಿ 10 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಹಿಂದೆ ಕೇವಲ 3-4-5 ಕೋಟಿ ರೂಪಾಯಿಗಳ ಮೇಲೆ ಒದಗಿಸಲಕ್ಕಾಗಲಿಲ್ಲ. ಈ ಸಾರಿ ಅದಕ್ಕೆ ಡಬ್ಬಲ್ ಹಣ ಒದಗಿಸಿದ್ದೇವೆ. ಟೆಕ್ನಿಕಲ್ ಕ್ಲಿಯರೆನ್ಸ್ ಮತ್ತು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ನಿಗೆ ಕಾಯಬೇಕಾಗುತ್ತದೆಂದರೆ ತುಮಕೂರು ಮುಂತಾದ ತಾಲ್ಲೂಕುಗಳಿಗೆ ನೀರು ಆರೇಳು ವರ್ಷಗಳಿಗೆ ಬಂದರೆ ಅಷ್ಟು ದಿವಸಗಳ ವರೆಗೂ ಇದಕ್ಕೆ ಒದಗಿಸಿದ್ದ ಹಣವೆಲ್ಲಾ ಪೇಸ್ಟ್ ಆಗುತ್ತದೆ. ಆದ್ದರಿಂದ ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರ ಕಾತುರತೆ ನಮಗೆ ಅರ್ಥವಾಗುತ್ತದೆ ಅಷ್ಟೇ ಕಾತುರತೆ ಸರ್ಕಾರಕ್ಕೂ ಇದೆ. ಆದ್ದರಿಂದ ಈಗ ನಡೆಯುತ್ತಿರುವ ಪ್ರಕಾರ ಕೆಲಸಗಳನ್ನು ಮಾಡಿಕೊಂಡು ಹೋಗುತ್ತೇವೆ.

ಶ್ರೀ ಎಚ್. ಟಿ ಕೃಷ್ಣಪ್ಪ.—ಎರಡನೆಯ ಹಂತದ ಕಾರ್ಯಕ್ರಮಗಳಲ್ಲಿ ನಾಗಮಂಗಲ ತಾಲೂಕಿಗೂ ಸಹ ನೀರು ಒದಗಿಸುವ ಆಶ್ವಾಸನೆ ಬಹಳ ಕಾಲದಿಂದಲೂ ಇದೆ. ಅಂತಹ ಪರಿಸ್ಥಿತಿಯೊಳಗೆ ಸ್ಪಷ್ಟವಾಗಿ ಖಚಿತವಾಗಿ ನಿಖರವಾಗಿ ನಾಗಮಂಗಲ ತಾಲ್ಲೂಕಿಗೆ ನೀರು ಸಿಗುತ್ತದೆಂಬ ಬಗ್ಗೆ ನನಗೆ ಈಗಲೇ ಆಶ್ವಾಸನೆ ಬೇಕು. 160 ಕೋಟಿ ರೂಪಾಯಿಗಳಲ್ಲಿ ಇದುವರೆಗೆ ಖರ್ಚಾಗಿರುವ ಮೊಬಲಗು ಎಷ್ಟು, ಸರಾಸರಿ 10 ಕೋಟಿ ರೂಪಾಯಿಗಳನ್ನು ವರ್ಷ ವರ್ಷ ಖರ್ಚು ಮಾಡುವುದಾದರೆ ಇನ್ನೆಷ್ಟು ವರ್ಷಗಳಲ್ಲಿ ನಾವು ಈ ನೀರಿನ ಸೌಲಭ್ಯ ಪಡೆಯಬಹುದೆಂಬುದರ ಬಗ್ಗೆ ದಯ ಮಾಡಿ ನನಗೆ ತಿಳಿಸಬೇಕು. ಅದರ ಜೊತೆಯಲ್ಲಿ ಕಾವೇರಿ ನೀರಿನ ವಿವಾದ ಈಗಾಗಲೇ ಒಂದು ಹಂತಕ್ಕೆ ಮುಟ್ಟಿದೆ. ವಿವಾದಾಸ್ಪದವಾದಂಥ ನೀರಿನ ಅಂಶ ಬಿಟ್ಟರೆ ವಿವಾದಕ್ಕೊಳಪಟ್ಟಿರುವ ನೀರಿನ ಹಂಚಿಕೆ ವಿಚಾರದಲ್ಲಿ ಯಾವ ವಿಧವಾದ ಆತಂಕವಿಲ್ಲವೆಂದು ಎಲ್ಲರೂ ಒಪ್ಪಿದ್ದಾರೆ. ಅಂದ ಮೇಲೆ ಹೇಮಾವತಿ ಯೋಜನೆಯಲ್ಲಿ ಶೇಖರಣೆ ಮಾಡುವ ನೀರಿನಿಂದ ನಾಗಮಂಗಲ ತಾಲ್ಲೂಕಿಗೆ ನೀರನ್ನು ಒದಗಿಸುವ ವಿಷಯದಲ್ಲಿ ಟೆಕ್ನಿಕಲ್ ಕ್ಲಿಯರೆನ್ಸ್ ಮತ್ತು ಫೈನಾನ್ಷಿಯಲ್ ಅಸಿಸ್ಟೆನ್ಸ್ ತೆಗೆದುಕೊಳ್ಳುವುದಕ್ಕೆ ಶೀಘ್ರ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಶೀಘ್ರ ಪ್ರಯತ್ನವೆಂದು ಹೇಳಿದರೆ ನನಗೇನೂ ಅರ್ಥವಾಗುತ್ತಾ ಇಲ್ಲ. ಇದರ ಬಗ್ಗೆ ನಮ್ಮ ನಿಮ್ಮ ಆತುರವಿದ್ದರೂ ಅನೇಕ ಅಡಚಣೆಗಳು ಇವೆ. ಮೊದಲನೆಯ ಅಡಚಣೆ ಹಣ. ಎರಡನೆಯದು ನಮ್ಮ ತೀರ್ಮಾನ ಇನ್ನೂ ಅಂತಿಮವಾಗಿ ಆಗಿಲ್ಲ. ಆದರೂ ನಮ್ಮ ಕಾರ್ಯಕ್ರಮಗಳನ್ನು ನಿಲ್ಲಿಸುವುದಿಲ್ಲವೆಂದು ನಾನು ಹಿಂದೆಯೇ ಹೇಳಿದ್ದೇನೆ ಕೇಂದ್ರ ಸರ್ಕಾರಕ್ಕೂ ಸಹ ಈ ವಿಚಾರವನ್ನು ತಿಳಿಸಿದ್ದೇನೆ. ಮುತ್ತೆ ಇವತ್ತು ತಮಗೂ ಹೇಳುತ್ತಾ ಇದ್ದೇನೆ. ಹೇಮಾವತಿಯಿಂದ 7 ಲಕ್ಷ ಎಕರೆಗೆ ನೀರು ಕೊಡುವ ಯೋಜನೆಯಲ್ಲಿ ನಾಗಮಂಗಲ ತಾಲ್ಲೂಕೂ ಸೇರಿದೆ ಮತ್ತು ತುಮಕೂರಿನ ಕೆಲವು ಭಾಗಗಳೂ ಸಹ ಸೇರಿವೆ. ಆದರೆ 7ಲಕ್ಷ ಎಕರೆಗೆ ನೀರು ಒದಗಿಸುವ ವ್ಯವಸ್ಥೆಯ ಕಾರ್ಯಕ್ರಮ ಮುಗಿಯುವುದಕ್ಕೆ ಅನೇಕ ಸಂದರ್ಭಗಳಿಂದ ನಿಲ್ಲಿಸಿದೆ. ಅದಕ್ಕೆ ಮುಖ್ಯ ಕಾರಣ ಹಣದ ಪರಿಸ್ಥಿತಿ. ಇದುವರೆಗೆ ನಾವು ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಖರ್ಚು ಮಾಡಿರುವುದು 40 ಕೋಟಿ ರೂಪಾಯಿಗಳು. ಈಗ ಹೊಸದಾಗಿ 10 ಕೋಟಿ ರೂಪಾಯಿಗಳನ್ನು ಆ ಬಾಬಿಗೆ ಕೊಟ್ಟಿರೆ, ಅಲ್ಲಿಗೆ 50 ಕೋಟಿ ರೂಪಾಯಿಗಳಾಗುತ್ತದೆ. ಈಗ ಇದರ ಒಟ್ಟು ಯೋಜನೆಗಾಗಿ 110 ಕೋಟಿ ರೂಪಾಯಿಗಳವರೆಗೆ ನಾವು ಇನ್ನೂ ಮುಂದೆ ಖರ್ಚುಮಾಡಬೇಕಾಗಿದೆ. ಮುಂದಿನ ವರ್ಷ ಒಂದುವೇಳೆ 20 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ಒಟ್ಟು 110 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಖರ್ಚುಮಾಡಲು ಇನ್ನೂ ನಾಲ್ಕೈದು ವರ್ಷಗಳು ಬೇಕಾಗುತ್ತದೆ. ಆದರೆ 110 ಕೋಟಿ ರೂಪಾಯಿಗಳನ್ನು ಇದೊಂದೇ ಪ್ರಾಜೆಕ್ಟಿಗೆ ಇಡೀ ಪ್ಲಾನ್

ಬಡ್ಜೆಟ್ ಪ್ರಕಾರ ಒಂದೇ ವರ್ಷದಲ್ಲಿ ಕೊಡುವುದಕ್ಕಾಗುವುದಿಲ್ಲ. ಎರಡನೆಯದಾಗಿ ನೀರಿನ ವ್ಯವಸ್ಥೆ ಏನಾಗುತ್ತದೆಂಬುದನ್ನು ಮತ್ತೆ ಮತ್ತೆ ಹೇಳುವ ಅಗತ್ಯವಿಲ್ಲ. ಒಂದು ಅರ್ಥದಲ್ಲಿ ಅದರ ಬಗ್ಗೆ ಇಂಟೆರಿಂ ಅರೇಂಜ್‌ಮೆಂಟ್ ಆಗಿದೆಯೆಂದು ಹೇಳಿದ್ದೇನೆ. ಮುಂದೇನಾಗುತ್ತದೆಂಬುದನ್ನು ಅದರ ಬಗ್ಗೆ ಈಗಲೇ ಹಾಗೆ, ಹೀಗೆ ಎಂದು ಹೇಳುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು.

ಶ್ರೀ ಬಿ. ಭೈರಪ್ಪಾಜಿ.—ಮಾನ್ಯ ಮುಖ್ಯಮಂತ್ರಿಗಳು ತುಮಕೂರು ಜಿಲ್ಲೆಗೆ ಮತ್ತು ನಾಗಮಂಗಲ ತಾಲ್ಲೂಕಿಗೆ ವ್ಯವಸಾಯಕ್ಕೆ ನೀರು ಕೊಡುವ ಬಗ್ಗೆ ನಿಮ್ಮಪ್ಪನವರೇ ಆತುರವಿದೆ ಎಂಬುದನ್ನು ವ್ಯಕ್ತಮಾಡಿದ್ದಾರೆ. ಅದರಿಂದ ನಮಗೆ ಸಂತೋಷವಾಗಿದೆ ನಮ್ಮ ಒಂದು ಆತುರ ಏನೆಂದರೆ ಈಗಲೇ ಯೋಜನೆಯನ್ನು ಬೇಗ ಪ್ರಾರಂಭಿಸೋಣ ಎಂಬುದು ನಮ್ಮ ಸರ್ಕಾರ ಯೋಜನೆ ಕಾರ್ಯಗತ ಮಾಡುತ್ತದೆಂಬುದರಲ್ಲಿ ನಮಗೆ ಅನುಮಾನವೇನೂ ಇಲ್ಲ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ನಾವು ಅನೇಕ ಸಾರಿ ಹೇಳಿದ್ದೇವೆ. ಅದಷ್ಟು ಬೇಗ ನಮ್ಮಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಕಾರ್ಯ ಕೈಗೊಂಡು ವ್ಯವಸಾಯಕ್ಕೆ ಅನುಕೂಲ ಮಾಡಿಕೊಡುವ ಪ್ರಯತ್ನ ಮಾಡಿದರೆ ನಮ್ಮ ಜಿಲ್ಲೆಯ ಜನತೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜಅರಸ್ ಅವರನ್ನು ಎಂದಿಗೂ ಮರೆಯುವುದಿಲ್ಲ ಆದ್ದರಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಈ ವರ್ಷವೇ ಕೆಲಸ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ಏಪರ್ಾಡು ಮಾಡುತ್ತೀರಾ?

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರು ಮಾನಪತ್ರ ಕೊಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅವರು ನನ್ನನ್ನು ಜ್ಞಾಪಿಸಿಕೊಳ್ಳಲಿ. ಬಿಡಲಿ ಅದು ಮುಖ್ಯವಲ್ಲ. ಮುಖ್ಯವಾದುದೇನೆಂದರೆ ಆ ಜಿಲ್ಲೆಗಳಿಗೆ ನೀರು ಕೊಡುವುದಕ್ಕೆ ಎಷ್ಟು ಬೇಗ ಸಾಧ್ಯವಾಗುವುದೋ ಅಷ್ಟು ಬೇಗ ಕೊಡುವುದು. ಮಾನ್ಯ ಸದಸ್ಯರಿಗೆ ಆ ಬಗ್ಗೆ ಎಷ್ಟು ಆತುರ ಇದೆಯೋ ಅಷ್ಟೇ ಆತುರ ನಮಗೂ ಇದೆ. ಎಂ.ಐ.ಪಿ.ಸಿ. ಬೋರ್ಡಿನಿಂದ ಕ್ಲಿಯರೆನ್ಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದು ಬೇಗ ಬಂದರೆ ಫಸ್ಟ್ ಸ್ಟೇಜ್‌ನಲ್ಲೇ ಕೆಲವು ಭಾಗವನ್ನು ಸೇರ್ಪಡೆ ಮಾಡಬೇಕು ಎಂಬ ಅಭಿಪ್ರಾಯ ಇದೆ. ಎಂ. ಐ.ಪಿ ಸಿ. ಬೋರ್ಡಿನಿಂದ ಕ್ಲಿಯರೆನ್ಸ್ ಎಲ್ಲ ಬಂದು ಅಪ್ರೂವಲ್ ಆದರೆ ಕೇಂದ್ರದ ಸಹಾಯವಿಲ್ಲದೆ ಬೇರೆ ಕಡೆಯಿಂದಲೂ ಸಾಲ ಸಿಕ್ಕಿದರೆ ಆ ಕಾರ್ಯ ಮಾಡುವುದಕ್ಕೆ ಪ್ರಯತ್ನ ಮಾಡೋಣ.

Accommodation to R.T.O.s Offices

120 SRI T. R. SHAMANNA (Fort).—Will the Minister for Transport and Tourism be pleased to state :—

(*a*) the steps taken to provide suitable accommodation to R.T.O Offices in Bangalore City;

(*b*) the step taken to minimise the hardship caused to the Motor Vehicle Owners while paying their Motor Vehicle Taxes by providing suitable accommodation which is convenient and functional ?

SRI M. MOHAMMED ALI (Minister for Transport and Tourism). –

(*a*) Action has been taken to initiate the acquisition proceedings to acquire the land and the building at No. 5, Cunningham Road, Bangalore for the construction of a new building to house the Regional Transport Offices, Bangalore.